4ನೇ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು ಹಾಗೂ ಸ್ಪೇಷಲ್ ನ್ಯಾಯಾಧೀಶರು
(ಪಿಸಿಎ) ಬೆಳಗಾವಿ ಇವರ ನ್ಯಾಯಾಲಯದಲ್ಲಿ
ಮುಕ್ಕಾಂಃ ಬೆಳಗಾವಿ.

ಸ್ಪೇಷಲ್ ಕೇಸ್ ನಂಃ 533/2019
ಫ್ರಾಸಾಃ 6,
ಚಾಸಾಃ 6

| | |
|---|---|
| ಸಾಕ್ಷಿಯ ಹೆಸರುಃ | ಮಲ್ಲಿಕಾರ್ಜುನ ಶ್ರೀಶೈಲ ಜೋಗುರ |
| ತಂದೆಯ ಹೆಸರುಃ | ಶ್ರೀಶೈಲ ಜೋಗುರ |
| ವಯಸ್ಸುಃ | 50 ವರ್ಷ |
| ಉದ್ಯೋಗಃ | ಕಾರ್ಮಿಕ ಅಧಿಕಾರಿ, ಉಪ ವಿಭಾಗ-1 ಬೆಳಗಾವಿ |
| ವಾಸ್ತವ್ಯಃ | ಬೆಳಗಾವಿ |

ದಿನಾಂಕಃ **13.01.2025** ರಂದು ಸಾಕ್ಷಿಯನ್ನು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

**ಮುಖ್ಯ ವಿಚಾರಣೆಃ ವಿಶೇಷ ಸರ್ಕಾರಿ ಅಭಿಯೋಜಕರಿಂದಃ**

ನಾನು ದಿ 28.06.2017 ರಿಂದ 08.09.2020 ವರೆಗೆ ಉಪ ವಿಭಾಗ -2 ರಲ್ಲಿ ಕಾರ್ಮಿಕ ಅಧಿಕಾರಿ ಎಂದು ಕರ್ತವ್ಯ ನಿರ್ವಹಿಸಿದ್ದೇನು.

ದಿ 11.07.2018 ರಂದು ಎಸಿಬಿ ಅವರ ಕೋರಿಕೆ ಮೇರೆಗೆ ನಾನು ನನ್ನ ಕಚೇರಿಯ ಸಿಬ್ಬಂದಿಯ ಹಾಜರಾತಿ ಪುಸ್ತಕವನ್ನು ಜೆರಾಕ್ಸ ಮಾಡಿ ಅದನ್ನು ದೃಢೀಕರಿಸಿ ಎಸಿಬಿ ಪೊಲೀಸ ಇನಸ್ಪೆಕ್ಟರವರಿಗೆ ಕೊಟ್ಟಿರುತ್ತೇನೆ . ಮೂಲ ಹಾಜರಾತಿ ಪುಸ್ತಕವನ್ನು ನಾನು ಮೂಲ ಹಾಜರಾತಿ ಪುಸ್ತಕವನ್ನು ಜೆರಾಕ್ಸ ಮಾಡಿ ದೃಢೀಕರಿಸಿ ಕೊಟ್ಟು ಮೂಲ

ಹಾಜರಾತಿ ಪುಸ್ತಕ ವಾಪಸ್ಸು ಪಡೆದ ಬಗ್ಗೆ ಸ್ವೀಕೃತಿ ಪತ್ರವನ್ನು ಎಸಿಬಿ ಪೊಲೀಸ ಇನಸ್ಪೆಕ್ಟರಗೆ ಕೊಟ್ಟಿರುತ್ತೇನೆ. ಸ್ವೀಕೃತಿ ಪತ್ರವನ್ನು ನಾನು ಗುರುತಿಸಿದ್ದು ಅದನ್ನು ನಿಪಿ-14 ಎಂದು ಗುರುತಿಸಲಾಯಿತು. ನಿಪಿ-14(ಎ) ನನ್ನ ಸಹಿ. ನಮ್ಮ ಕಚೇರಿಯಲ್ಲಿ ಇದ್ದ ಹಾಜರಾತಿ ಪುಸ್ತಕ ಮತ್ತು ದಾಖಲೆಗಳನ್ನು ಎಸಿಬಿ ಪೊಲೀಸ ಇನಸ್ಪೆಕ್ಟರ ಜಪ್ತು ಮಾಡಿದ್ದು ಹಾಜರಾತಿ ಪುಸ್ತಕ ಮತ್ತು ದಾಖಲೆಗಳು ನಮ್ಮ ಕಚೇರಿಯ ಕೆಲಸಕ್ಕೆ ಬೇಕಾಗಿದೆ ಎಂದು ಅದನ್ನು ಮೂಲ ದಾಖಲೆಗಳನ್ನು ವಾಪಸ್ಸು ಕೊಡುವಂತೆ ನಾನು ಎಸಿಬಿ ಪೊಲೀಸ ಇನಸ್ಪೆಕ್ಟರವರಿಗೆ ಕೊಟ್ಟ ಮನವಿ ಪತ್ರವನ್ನು ಗುರುತಿಸಿದ್ದು ಅದನ್ನು ನಿಪಿ-15 ಎಂದು ಗುರುತಿಸಲಾಯಿತು. ನಿಪಿ-15(ಎ) ನನ್ನ ಸಹಿ. ನಾನು ಎಸಿಬಿ ಅವರಿಗೆ ಎರಡೂ ಕಚೇರಿಯ ಹಾಜರಾತಿ ಪುಸ್ತಕಗಳನ್ನು ಜೆರಾಕ್ಸ ಮಾಡಿಸಿ ದೃಢೀಕರಿಸಿ ಕೊಟ್ಟಿದ್ದು ಇದು ನನ್ನ ಕಚೇರಿಯ 1ನೇ ಆರೋಪಿಯು ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿದ ಹಾಜರಾತಿ ಪುಸ್ತಕ 201 ಪುಟಗಳನ್ನು ಹೊಂದಿದ್ದು ಅದರ ದೃಢೀಕರಿಸಿ ಕೊಟ್ಟ ದಾಖಲೆಯನ್ನು ಗುರುತಿಸಿದ್ದೇನೆ. ಅದು ಒಟ್ಟು 201 ಪುಟಗಳನ್ನು ಹೊಂದಿರುತ್ತದೆ. ಪುಟ ಸಂಖ್ಯೆ 63 ರಲ್ಲಿ ಅನುಕ್ರಮ 2 ರಲ್ಲಿ 1ನೇ ಆರೋಪಿಯು ದಿ 07.07.2018 ರಂದು ಕೆಲಸಕ್ಕೆ ಹಾಜರಾದ ಬಗ್ಗೆ ಸಹಿ ಹಾಕಿರುತ್ತಾನೆ. ಇನ್ನೊಂದು ಹಾಜರಾತಿ ಪುಸ್ತಕವು 2ನೇ ಆರೋಪಿಯು ಸಹಿ ಹಾಕಿದ ಹಾಜರಾತಿ ಪುಸ್ತಕ ಆಗಿದ್ದು ಅದರಲ್ಲಿ ಒಟ್ಟು 188 ಪುಟಗಳು ಇದ್ದು ಪುಟ ಸಂಖ್ಯೆ 116 ರಲ್ಲಿ 2ನೇ ಆರೋಪಿಯು ದಿ 07.07.2018 ರಂದು ಕರ್ತವ್ಯಕ್ಕೆ ಹಾಜರಾದ ಬಗ್ಗೆ ಸಹಿ ಹಾಕಿರುತ್ತಾನೆ. ಈ ಎರಡೂ ಹಾಜರಾತಿ

ಪುಸ್ತಕಗಳನ್ನು ನಾನು ದೃಢೀಕರಿಸಿ ಕೊಟ್ಟ ದಾಖಲೆಗಳನ್ನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-8 ಎಂದು ಗುರುತಿಸಲಾಗಿದೆ. ನಾನು ಈ ದಾಖಲೆಗಳನ್ನು ದೃಢೀಕರಿಸಿದ ಬಗ್ಗೆ ಪ್ರತಿ ಪುಟಕ್ಕೂ ಸಹಿ ಹಾಕಿದ್ದು ಎಲ್ಲಾ ಪುಟದಲ್ಲಿ ಇರುವ ನನ್ನ ಸಹಿಗಳನ್ನು ಗುರುತಿಸಿದ್ದೇನೆ. ಮೊದಲ ಹಾಜರಾತಿದ ದೋಷಾರೋಪಣಾ ಪತ್ರದ ಪುಟ ಸಂಖ್ಯೆ 88 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-8(ಎ) ಎಂದು ಗುರುತಿಸಲಾಯಿತು. ಇನ್ನೊಂದು ಹಾಜರಾತಿ ಪುಸ್ತಕದಲ್ಲಿ ಇರುವ ಸಹಿಗಳ ಪೈಕಿ ದೋಷಾರೋಪಣಾ ಪತ್ರದ ಪುಟ ಸಂಖ್ಯೆ 127 ರಲ್ಲಿ ಇರುವ ಸಾಕ್ಷಿ ಸಹಿಯನ್ನು ನಿಪಿ-8(ಬಿ) ಎಂದು ಗುರುತಿಸಲಾಯಿತು. ನಾನು ಈ ಬಗ್ಗೆ ದಿ 11.07.2018 ರಂದು ಎಸಿಬಿ ಪೊಲೀಸ ಇನಸ್ಪೆಕ್ಟರವರಿಗೆ ಹೇಳಿಕೆ ಕೊಟ್ಟಿರುತ್ತೇನೆ

ದಿ 24.07.2018 ರಂದು ನನಗೆ ಎಸಿಬಿ ಪೊಲೀಸ ಇನಸ್ಪೆಕ್ಟರ ಪುನಃ ಕರೆದಿದ್ದು ನಾನು ಎಸಿಬಿ ಕಚೇರಿಗೆ ಬೆಳಿಗ್ಗೆ 11-00 ಗಂಟೆಗೆ ಹೋದಾಗ ಅಲ್ಲಿ ಪಂಚರಾದ ಚಾಸಾ-4 ಶೇಡಬಾಳ, ಚಾಸಾ-5 ಭಜಂತ್ರಿ ಇವರು ಅಲ್ಲಿ ಇದ್ದರು ಅವರನ್ನು ಎಸಿಬಿಯವರು ನನಗೆ ಪರಿಚಯ ಮಾಡಿಕೊಟ್ಟರು. ಎಸಿಬಿ ಪೊಲೀಸ ಇನಸ್ಪೆಕ್ಟರವರು ನನಗೆ ಆರೋಪಿತರಾದ ಭೀಮಪ್ಪ ಜಾಧವ ಮತ್ತು ಯೋಗೇಂದ್ರ ರಾಠೋಡ ಇವರುಗಳ ಧ್ವನಿಯನ್ನು ಗುರುತಿಸುವಂತೆ ಹೇಳಿದಾಗ ನಾನು ಅವರ ಧ್ವನಿ ಗುರುತಿಸುವುದಾಗಿ ಹೇಳಿದೆನು. ಆರ್ಟಿಕಲ್ 6 ಮತ್ತು 17 ಡಿವಿಡಿ ಗಳಲ್ಲಿ ಇರುವ ಧ್ವನಿಯನ್ನು ಗುರುತಿಸುವಂತೆ ನನಗೆ ಎಸಿಬಿ ಪೊಲೀಸ ಇನಸ್ಪೆಕ್ಟರ ಹೇಳಿದರು.

ಅರೋಪಿತರು ನನ್ನ ಕೈ ಕೆಳಗೆ ದಿನನಿತ್ಯ ಕೆಲಸ ಮಾಡುತ್ತಿದ್ದರಿಂದ ನನಗೆ ಆರೋಪಿತರ ಧ್ವನಿ ಗೊತ್ತಿತ್ತು. ಹಾಗಾಗಿ ನಾನು ಅವರ ಧ್ವನಿಯನ್ನು ಗುರುತಿಸುವುದಾಗಿ ಹೇಳಿದೆನು. ಮೊದಲು ಆರ್ಟಿಕಲ್ 6 ನ್ನು ಎಸಿಬಿ ಅವರು ಪ್ಲೇ ಮಾಡಿ ಕೇಳಿಸಿದರು. ಅದರಲ್ಲಿ 2ನೇ ಆರೋಪಿಯ ವಿಡಿಯೋ ಸಹಿತ ಆಡಿಯೋ ಇತ್ತು. ಆಗ ನಾನು 2ನೇ ಆರೋಪಿಯನ್ನು ಮತ್ತು ಆತನ ಧ್ವನಿಯನ್ನು ಗುರುತಿಸಿದೆನು. ಆರ್ಟಿಕಲ್ 6 ರಲ್ಲಿ 2 ಪೋಲ್ಡರಗಳು ಇದ್ದು ಒಂದು ಪೋಡ್ಲರನಲ್ಲಿ ಆಡಿಯೋ ಇದ್ದು ಇನ್ನೊಂದು ಪೋಲ್ಡರನಲ್ಲಿ ಆಡಿಯೋ ಮತ್ತು ವಿಡಿಯೋ ಇತ್ತು. ಆರ್ಟಿಕಲ್ 6 ರಲ್ಲಿ ಇದ್ದ ಆಡಿಯೋ ಪೋಲ್ಡರನಲ್ಲಿ 1ನೇ ಆರೋಪಿ ಮಾತನಾಡಿದ ಧ್ವನಿ ಇದ್ದು ಅದನ್ನು ಗುರುತಿಸಿದೆನು. ಆಡಿಯಾೀ ವಿಡಿಯೋ ಪೋಲ್ಡರನಲ್ಲಿ 2ನೇ ಆರೋಪಿಯ ಧ್ವನಿ ಇದ್ದು 2ನೇ ಆರೋಪಿ ಸಹ ಇದ್ದು ಅದನ್ನು ಗುರುತಿಸಿದೆನು. ನಂತರ ಆರ್ಟಿಕಲ್ 17 ನ್ನು ಲ್ಯಾಪಟಾಗೆ ಹಾಕಿ ಪ್ಲೇ ಮಾಡಿ ಕೇಳಿಸಿದರು. ಅದರಲ್ಲಿ ಒಂದು ಆಡಿಯೋ ಇದ್ದು 2ನೇ ಆರೋಪಿ ಮಾತನಾಡಿದ ಧ್ವನಿ ಮುದ್ರಣ ಇತ್ತು. ಅದನ್ನು ನಾನು ಗುರುತಿಸಿದೆನು.

ಆರ್ಟಿಕಲ್ 6 ಮತ್ತು 17 ನ್ನು ಪೊಲೀಸ ಇನಸ್ಪೆಕ್ಟರ ನಮಗೆ ಪ್ಲೇ ಮಾಡಿ ಕೇಳಿಸಿದ ನಂತರ ಪುನಃ ಅದನ್ನು ಪ್ಯಾಕ ಮಾಡಿ ಪಂಚರ ಸಮಕ್ಷಮ ಸೀಲ್ ಮಾಡಿದರು. S ಎಂಬ ಮೊಹರಿನಿಂದ ಅರಗಿನ ಮೇಲೆ ಹಾಕಿ ಸೀಲ್ ಮಾಡಿದರು. ಅಲ್ಲಿ ಧ್ವನಿ ದೃಢೀಕರಣ ಪಂಚನಾಮೆ ಮಾಡಲಾಯಿತು. ಧ್ವನಿ ದೃಢೀಕರಣ ಪಂಚನಾಮೆಯನ್ನು ಬೆಳಿಗ್ಗೆ 11 ಗಂಟೆಯಿಂದ ಮದ್ಯಾಹ್ಞ 1 ಗಂಟೆವರೆಗೆ ಮಾಡಿದರು. ಧ್ವನಿ ದೃಢೀಕರಣ

ಪಂಚನಾಮೆಯನ್ನು ನಾನು ಗುರುತಿಸಿದ್ದು ಅದನ್ನು ಈಗಾಗಲೇ ನಿಪಿ-11 ಎಂದು ಗುರುತಿಸಲಾಗಿದೆ. ನಿಪಿ-11(ಬಿ) ನನ್ನ ಸಹಿ. ಈ ಬಗ್ಗೆ ನಾನು ಪೊಲೀಸ ಇನಸ್ಪೆಕ್ಟರಗೆ ಹೇಳಿಕೆ ಕೊಟ್ಟಿರುತ್ತೇನೆ.

ಸಾಕ್ಷಿಗೆ ಆರ್ಟಿಕಲ್ 6 ಮತ್ತು ಆರ್ಟಿಕಲ್ 17 ನ್ನು ಲೋಕಾಯುಕ್ತ ಪೊಲೀಸರು ತಂದ ಲ್ಯಾಪಟಾಪಗೆ ಹಾಕಿ ಕೇಳಿಸಲು ಮಾನ್ಯ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು. ಆರ್ಟಿಕಲ್ 6/ಮು.ಮಾ-6 ನ್ನು ಲ್ಯಾಪಟಾಪಗೆ ಹಾಕಿ ಕೇಳಿಸಲಾಯಿತು. ಸಾಕ್ಷಿಯು ಅದರಲ್ಲಿ ಇದ್ದ ಒಂದು ಆಡಿಯೋ ವಿಡಿಯೋವನ್ನು ಕೇಳಿ ಅದರಲ್ಲಿ ಇದ್ದ ಧ್ವನಿ 2ನೇ ಆರೋಪಿಯದ್ದು ಎಂದು ಗುರುತಿಸಿದ್ದು ಅದರಲ್ಲಿ ಕಾಣುವ ವ್ಯಕ್ತಿ 2ನೇ ಆರೋಪಿ ಎಂದು ಗುರುತಿಸಿದ್ದಾರೆ. ಅದನ್ನೇ ಧ್ವನಿ ದೃಢೀಕರಣ ಪಂಚನಾಮೆ ಕಾಲಕ್ಕೆ ನನಗೆ ಇದೇ ಡಿವಿಡಿ ಮೂಲಕ ಕೇಳಿಸಿದ್ದು ಮತ್ತು ತೋರಿಸಿದ್ದು ಅದು ಯಥಾವತ್ತಾಗಿದೆ ಎಂದು ಗುರುತಿಸಿದ್ದಾರೆ. ಅದರಲ್ಲಿ ಇದ್ದ ಇನ್ನೊಂದು ಪೋಲ್ಡರನಲ್ಲಿ ಇದ್ದ ಧ್ವನಿ ಮುದ್ರಣವನ್ನು ಸಾಕ್ಷಿಯು ಕೇಳಿ ಅದರಲ್ಲಿ 1ನೇ ಆರೋಪಿಯ ಧ್ವನಿ ಇದೆ ಎಂದು ಗುರುತಿಸಿದ್ದು ಅದನ್ನೇ ಧ್ವನಿ ದೃಢೀಕರಣ ಪಂಚನಾಮೆ ಕಾಲಕ್ಕೆ ಕೇಳಿಸಿದ್ದು ಅದು ಯಥಾವತ್ತಾಗಿದೆ ಎಂದು ಗುರುತಿಸಿದ್ದಾರೆ.

ಸಾಕ್ಷಿಗೆ ಆರ್ಟಿಕಲ್ 17/ಮು.ಮಾ-16 ನ್ನು ಲ್ಯಾಪಟಾಪಗೆ ಹಾಕಿ ಪ್ಲೇ ಮಾಡಿ ಕೇಳಿಸಿದಾಗ ಸಾಕ್ಷಿಯು ಅದರಲ್ಲಿ ಇದ್ದ ಧ್ವನಿಯನ್ನು ಗುರುತಿಸಿ ಆ ಧ್ವನಿ 2ನೇ ಆರೋಪಿಯದ್ದು ಎಂದು ಗುರುತಿಸಿದ್ದು ಅದನ್ನೇ ಧ್ವನಿ ದೃಢೀಕರಣ ಪಂಚನಾಮೆ

ಕಾಲಕ್ಕೆ ಇದೇ ಡಿವಿಡಿ ಮೂಲಕ ನನಗೆ ಕೇಳಿಸಿದ್ದು ಅದು ಯಥಾವತ್ತಾಗಿದೆ ಎಂದು ಗುರುತಿಸಿದ್ದಾರೆ. ಆರೋಪಿ ನಂ.1 ಮತ್ತು 2 ರವರು ನ್ಯಾಯಾಲಯದ ಮುಂದೆ ಇದ್ದು ಗುರುತಿಸಿದ್ದೇನೆ.

**ಪಾಟೀ ಸವಾಲುಃ 1ನೇ ಆರೋಪಿ ಪರ ಮಾನ್ಯ ವಕೀಲರಿಂದಃ**

ದಿನಾಂಕ 11.07.2018 ಮತ್ತು 24.07.2018 ರ ನನ್ನ ಹೇಳಿಕೆ ಪ್ರತಿಯನ್ನು ನನಗೆ ಎಸಿಬಿ ಪೊಲೀಸ ಇನಸ್ಪೆಕ್ಟರ ಆ ಹೇಳಿಕೆ ಪಡೆದ ದಿನದಂದೇ ನನಗೆ ಕೊಟ್ಟಿರುತ್ತಾರೆ. ಆ ಹೇಳಿಕೆಗಳ ಪ್ರತಿಯನ್ನು ನಾನು ಈಗ ನ್ಯಾಯಾಲಯಕ್ಕೆ ತಂದಿದ್ದೇನೆ ಎಂದರೆ ನಿಜ. ಆ ಹೇಳಿಕೆಗಳನ್ನೇ ನಾನು ಈ ದಿನ ಓದಿಕೊಂಡು ಬಂದು ಸಾಕ್ಷಿ ಕಟ್ಟೆ ಹತ್ತಿದ್ದೇನೆ ಎಂದರೆ ನಿಜ.

ದಿ 07.07.2018 ರಂದು ನನ್ನ ಆದೇಶದ ಪ್ರಕಾರ 1ನೇ ಆರೋಪಿ ನಮ್ಮ ಕಚೇರಿಗೆ ಬಂದು ಹಾಜರಾತಿ ಪುಸ್ತಕಕ್ಕೆ ಸಹಿ ಹಾಕಿ ನನ್ನ ಆದೇಶದ ಮೇರೆಗೆ ಬೆಳಗಾವಿಯ ಜಿಲ್ಲಾಧಿಕಾರಿ ಕಚೇರಿಗೆ ಮೀಟಿಂಗಗೆ ಎಂದು ಹೋಗಿ ಮೀಟಿಂಗಗೆ ಹಾಜರಾದರು ಎಂದರೆ ನಿಜ. ದಿ 07.07.2018 ರಂದು ನನಗೆ ಉಡುಪಿ ಕಾರ್ಮಿಕ ಕಚೇರಿಯ ಅಧಿಕ ಪ್ರಭಾರ ಇದ್ದುದ್ದರಿಂದ ನಾನು ಕರ್ತವ್ಯ ನಿರ್ವಹಿಸಲು ಉಡುಪಿಗೆ ಹೋಗಿದ್ದೇನು ಎಂದರೆ ನಿಜ. ದಿ 07.07.2018 ರಂದು ನೀವು ಉಡುಪಿಯಲ್ಲಿ ಇದ್ದುದ್ದರಿಂದ ನಿಮಗೆ ಬೆಳಗಾವಿಯಲ್ಲಿ ಏನು ಆಯಿತು ಎಂದು ವೈಯಕ್ತಿಕ ಮಾಹಿತಿ ಇಲ್ಲ ಎಂದರೆ ಸಾಕ್ಷಿಯು ವೈಯಕ್ತಿಕ ಮಾಹಿತಿ ಇಲ್ಲ ಆದರೆ ನನಗೆ ರಾತ್ರಿ 10.00 ಗಂಟೆ

ನಂತರ ಬೆಂಗಳೂರಿನಿಂದ ನನ್ನ ಸಹೋದ್ಯೋಗಿ ಲೇಬರ ಇನಸ್ಪೆಕ್ಟರ ಒಬ್ಬರು ಪೋನ್ ಮಾಡಿ ಆರೋಪಿತರನ್ನು ಎಸಿಬಿ ಅವರು ಟ್ರ್ಯಾಪ್ ಮಾಡಿದರು ಎಂದು ಹೇಳಿದಾಗ ಗೊತ್ತಾಯಿತು ಎಂದು ಹೇಳುತ್ತಾರೆ.

ಯಾವುದೇ ಹೊಟೇಲ ಆಗಲೀ, ಅಂಗಡಿ ವಾಣಿಜ್ಯ ಸಂಸ್ಥೆಗಳನ್ನು ನಡೆಸುವವರು ಕಾರ್ಮಿಕರ ಇಲಾಖೆಯಲ್ಲಿ ಎಷ್ಟು ಜನ ಕಾರ್ಮಿಕರು ಕೆಲಸ ಮಾಡುತ್ತಾರೆ ಎಂಬ ಬಗ್ಗೆ ಅಥವಾ ಕೆಲಸ ಮಾಡದೇ ಇದ್ದರೆ ಯಾರೂ ಕೆಲಸ ಮಾಡುವುದಿಲ್ಲ ಎಂಬ ಬಗ್ಗೆ ಕಾರ್ಮಿಕ ಇಲಾಖೆಯಲ್ಲಿ ನೊಂದಣಿ ಮಾಡಿಸಬೇಕು ಎಂದರೆ ನಿಜ. ಈ ರೀತಿ ನೊಂದಾವಣೆ ಮಾಡಿಸಲು 3,000/- ನೊಂದಾವಣೆ ಫೀ ಕಟ್ಟಬೇಕು ಎಂದರೆ ಸಾಕ್ಷಿಯು ಅದಕ್ಕೆ ಸ್ಲ್ಯಾಬ್ ಇರುತ್ತದೆ, ಯಾರೂ ಕಾರ್ಮಿಕರು ಇಲ್ಲದೇ ಇದ್ದರೆ ನೊಂದಣಿ ಮಾಡಿಸಲು 300/- ರೂ., 9 ಜನ ಕಾರ್ಮಿಕರು ಇದ್ದರೆ ಅಂತಹ ಸಂಸ್ಥೆಯವರು ನೊಂದಾವಣಿ ಮಾಡಿಸಲು ನೊಂದಣಿ ಫಿ 600/- ರೂ. 10 ರಿಂದ 19 ಜನ ಕಾರ್ಮಿಕರು ಇದ್ದರೆ ಅಂತಹ ಸಂಸ್ಥೆಯವರು ನೊಂದಾವಣಿ ಮಾಡಿಸಲು ನೊಂದಣಿ ಫಿ 3,000/- ರೂ. ತುಂಬಬೇಕು ಎನ್ನುತ್ತಾರೆ. ಯಾವುದೇ ಅಂಗಡಿ ಹೊಟೇಲ ಮತ್ತು ವಾಣಿಜ್ಯ ಸಂಸ್ಥೆಗಳಲ್ಲಿ ಕಾರ್ಮಿಕರು ಇದ್ದರೆ ಹಾಜರಾತಿ ಪುಸ್ತಕ, ರೆಜಿಸ್ಟೇಷನ್ ಸರ್ಟಿಫಿಕೇಟ, ಬಾಲ ಕಾರ್ಮಿಕರನ್ನು ನೇಮಿಸಿದ್ದ ಬಗ್ಗೆ ಫಲಕಗಳನ್ನು ಇಡಬೇಕಾಗುತ್ತದೆ ಎಂದರೆ ನಿಜ. ಯಾವುದೇ ಕಾರ್ಮಿಕ ನಿರೀಕ್ಷಕರು ಹೊಟೇಲ, ಅಂಗಡಿ, ವಾಣಿಜ್ಯ ಸಂಸ್ಥೆಗಳಿಗೆ ಭೇಟಿ ನೀಡಿದರೆ ಆ ಅಂಗಡಿ ಮಾಲೀಕರು ಮೇಲೆ ಹೇಳಿದ ದಾಖಲೆಗಳನ್ನು

ಅವರಿಗೆ ತೋರಿಸಬೇಕಾಗುತ್ತದೆ ಎಂದರೆ ನಿಜ. ಒಂದು ವೇಳೆ ಅಂಗಡಿ / ಹೊಟೇಲ/ ವಾಣಿಜ್ಯ ಸಂಸ್ಥೆಗಳ ಮಾಲೀಕರು ದಾಖಲೆಗಳನ್ನು ತೋರಿಸದೇ ಇದ್ದರೆ ಕಾರ್ಮಿಕ ನಿರೀಕ್ಷಕರು ಅಂತಹ ಸಂಸ್ಥೆಗಳಿಗೆ ನೊಟೀಸ ನೀಡಿ ಆ ದಾಖಲೆಗಳನ್ನು ಹಾಜರು ಮಾಡುವಂತೆ ಹೇಳಬಹುದು ಎಂದರೆ ನಿಜ.

ಈ ಪ್ರಕರಣದಲ್ಲಿ 1ನೇ ಆರೋಪಿ ರಸೋಯಿ ದಿ ಪಂಜಾಬಿ ಕಿಚನ್ ಇದರ ಮಾಲೀಕರಿಗೆ ದಾಖಲೆಗಳನ್ನು ಹಾಜರು ಮಾಡುವಂತೆ ನೊಟೀಸ ನೀಡಿದ್ದಾರೆ ಎಂದರೆ ಸಾಕ್ಷಿಯು ಅವರು ನೊಟೀಸ ನೀಡಿರಬಹುದು ಆದರೆ ಅದರ ಬಗ್ಗೆ ನನಗೆ ಯಾವುದೇ ವರದಿ ಸಲ್ಲಿಸಿಲ್ಲ ಎನ್ನುತ್ತಾರೆ. ನೀವು ರಸೋಯಿ ದಿ ಪಂಜಾಬಿ ಕಿಚನ್ ಗೆ ಲೈಸನ್ಸ ದಾಖಲೆಗಳನ್ನು ಪರಿಶೀಲನೆ ಮಾಡಿದ್ದೀರಾ ಎಂದರೆ ಸಾಕ್ಷಿಯು ನಾನು ಆ ಸಂಸ್ಥೆಗೆ ಸಂಬಂಧಪಟ್ಟಂತೆ ದಾಖಲೆಗಳನ್ನು ಪರಿಶೀಲನೆ ಮಾಡಿಲ್ಲ ಅದನ್ನು ಪರಿಶೀಲನೆ ಮಾಡುವವರು ಕಾರ್ಮಿಕ ನಿರೀಕ್ಷಕರು ಎನ್ನುತ್ತಾರೆ. ಎಸಿಬಿ ಅಧಿಕಾರಿಗಳು ನನಗೆ ರಸೋಯಿ ದಿ ಪಂಜಾಬಿ ಕಿಚನ್ ನ ಲೈಸನ್ಸ ದಾಖಲೆಗಳನ್ನು ಕೇಳಿರುವುದಿಲ್ಲ. ರಸೋಯಿ ದಿ ಪಂಜಾಬಿ ಕಿಚನ್ ಹೊಟೇಲನ್ನು ಕಾಯ್ದೆ ಬದ್ಧವಾಗಿ ನಡೆಸಲಾಗುತ್ತಿತ್ತು ಎಂದು ಹೇಳಲು ನಾನು ಎಸಿಬಿ ಅವರಿಗೆ ಯಾವುದೇ ದಾಖಲೆಗಳನ್ನು ಕೊಟ್ಟಿಲ್ಲ.

1ನೇ ಆರೋಪಿಯು ದಿ 17.07.2018 ಕ್ಕಿಂತ ಒಂದೂವರೆ ತಿಂಗಳ ಹಿಂದೆ ಅಂದರೆ ದಿ 23.05.2018 ರಂದು ಬೇರೆ ಕಡೆಯಿಂದ ನಮ್ಮ ಕಚೇರಿಗೆ ವರ್ಗಾವಣೆ ಆಗಿ ಕಚೇರಿ ಕರ್ತವ್ಯಕ್ಕೆ ಹಾಜರಾದರು ಎಂದರೆ ನಿಜ. ನಾನು ಪ್ರತಿ ದಿನವೂ 1ನೇ

ಆರೋಪಿಯನ್ನು ಭೇಟಿ ಆಗುವುದಿಲ್ಲ ಎಂದರೆ ನಿಜ. ನನ್ನನ್ನು ಎಸಿಬಿ ಅವರು ಯಾವತ್ತೂ ಆರೋಪಿತರ ಧ್ವನಿಯನ್ನು ಗುರುತಿಸುವಂತೆ ಎಸಿಬಿ ಕಚೇರಿಗೆ ಕರೆಸಿಲ್ಲ ಎಂದರೆ ಸರಿಯಲ್ಲ. ನನ್ನ ಸಮಕ್ಷಮ ಎಸಿಬಿ ಅವರು ಯಾವುದೇ ಡಿವಿಡಿ ಯನ್ನು ಪ್ಲೇ ಮಾಡಿ ಕೇಳಿಸಿಲ್ಲ ಎಂದರೆ ಸರಿಯಲ್ಲ. ನಾನು ಯಾವತ್ತೂ ಯಾವುದೇ ಡಿವಿಡಿ ಯಲ್ಲಿ ಇದ್ದ ಧ್ವನಿಯನ್ನು ಗುರುತಿಸಿಲ್ಲ ಎಂದರೆ ಸರಿಯಲ್ಲ. ನನಗೆ ಎಸಿಬಿ ಅವರು ಕೊಟ್ಟ ನನ್ನ ಹೇಳಿಕೆ ಪ್ರತಿಯನ್ನು ನೋಡಿ ಎಸಿಬಿ ಅವರು ಹೇಳಿ ಕೊಟ್ಟ ರೀತಿಯಲ್ಲಿ ನಾನು ಅವರು ಹೇಳಿದಂತೆ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ. ರಸೋಯಿ ದಿ ಪಂಜಾಬಿ ಕಿಚನ್ ಹೊಟೇಲ ನವರು ಕಾನೂನು ಉಲ್ಲಂಘನೆ ಮಾಡಿದ್ದಾರೆ ಎಂದು ನಿಮಗೆ ತಿಳಿದು ಬಂದ ನಂತರ ನೀವು ಇಲ್ಲಿಯವರೆಗೂ ಅವರ ವಿರುದ್ಧ ಕಾನೂನು ಕ್ರಮ ಕೈಗೊಂಡಿದ್ದೀರಾ ಎಂದರೆ ಸಾಕ್ಷಿಯು ಈ ಹಿಂದೆ ನಮ್ಮ ಇಲಾಖೆಯಿಂದ ಅವರು ಕಾನೂನು ಉಲ್ಲಂಘನೆ ಮಾಡಿದ್ದಾರೆ ಎಂದು ಅವರ ವಿರುದ್ಧ ಪ್ರಕರಣಗಳು ದಾಖಲು ಆಗಿದೆ ಎನ್ನುತ್ತಾರೆ. ಆ ರೀತಿ ಕೇಸು ದಾಖಲಾದ ಬಗ್ಗೆ ದಾಖಲೆಗಳು ನಮ್ಮ ಕಚೇರಿಯಲ್ಲಿ ಇವೆ ಎಂದರೆ ನಿಜ.

**ಪಾಟೀ ಸವಾಲುಃ 2ನೇ ಆರೋಪಿ ಪರ ಮಾನ್ಯ ವಕೀಲರಿಂದ**

ವಾಣಿಜ್ಯ ಸಂಸ್ಥೆಗಳಲ್ಲಿ ದಾಖಲೆಗಳನ್ನು ಸರಿಯಾಗಿ ಇಡದೇ ಇದ್ದರೆ ಕಾರ್ಮಿಕ ನಿರೀಕ್ಷಕರು ದಾಖಲೆಗಳನ್ನು ಹಾಜರು ಮಾಡುವಂತೆ ನೊಟಿಸು ಕೊಟ್ಟರೆ ವಾಣಿಜ್ಯ ಸಂಸ್ಥೆಯ ಮಾಲೀಕರು ಇನ್ನು ಮುಂದೆ ದಾಖಲೆಗಳನ್ನು ಸರಿಯಾಗಿ ಇಡುವುದಾಗಿ

ಕಾರ್ಮಿಕ ನಿರೀಕ್ಷಕರಿಗೆ ಮನವಿ ಪತ್ರ ಕೊಡುತ್ತಾರೆ ಎಂದರೆ ನಿಜ. ಸಾಕ್ಷಿ ಮುಂದುವರೆದು ಕಾರ್ಮಿಕ ನಿರೀಕ್ಷಕರಿಗೆ ವಾಣಿಜ್ಯ ಸಂಸ್ಥೆಯ ಮಾಲೀಕರು ತಾವು ಸರಿಯಾದ ದಾಖಲೆಗಳನ್ನು ಇಡುವುದಾಗಿ ಕಾಲಾವಕಾಶ ಕೋರಿ ನಂತರ ಸರಿಯಾದ ದಾಖಲೆಯನ್ನು ಇಟ್ಟರೆ ನಂತರ ಕೆಲವೊಂದು ಬಾರಿ ಕಾನೂನು ಕ್ರಮ ಕೈಗೊಳ್ಳುವುದಿಲ್ಲ ಎನ್ನುತ್ತಾರೆ. ಮು.ಮಾ–16/ಆರ್ಟಿಕಲ್ 17 ರಲ್ಲಿ "ಕೋಡ್ರಲಾ ಇನ್ನೊಂದು ಕೊಡ್ರಿ ವೈಟ್ ಪೇಪರ ಮ್ಯಾಲ್ ಕಂಪ್ಲೇಂಟ್ ಲೆಟರ್ ಬರದ ಕೋಡ್ರಲಾ" ಎಂದು ಧ್ವನಿ ಮುದ್ರಣ ಇದೆ ಎಂದರೆ ನಿಜ. ನಂತರ ಪಿರ್ಯಾದಿದಾರನು "ಅಂದರ ಏನ್ ಬರೆದು ಕೊಡ್ಲಿ ಸರ್, ಹೇ ಗೇರೆ ಅಮಚಾ ಏಕ ವೈಟ್ ಪೇಪರ" ಎಂದು ಹೇಳಿರುವುದು ಧ್ವನಿ ಮುದ್ರಣ ಇದೆ ಎಂದರೆ ನಿಜ. 2ನೇ ಆರೋಪಿಯನ್ನು ಪಿರ್ಯಾದಿದಾರನೇ ಫೋನ್ ಮಾಡಿ ಹೊಟೇಲಗೆ ಕರೆದಿದ್ದಾನೆ ಎಂದು ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿಯು ಆತನೇ ಕರೆದಿರಬಹುದು ಅದು ನನಗೆ ಗೊತ್ತಿಲ್ಲ ಎನ್ನುತ್ತಾರೆ. 1ನೇ ಆರೋಪಿಯು ಪಿರ್ಯಾದಿಯ ಹೊಟೇಲನವರಿಗೆ ಪಿರ್ಯಾದಿ ಕೊಟ್ಟ ದೂರಿನಲ್ಲಿ ನಮೂದನೆ ಇದೆ ಎಂದರೆ ನನಗೆ ಗೊತ್ತಿಲ್ಲ. 1ನೇ ಆರೋಪಿಯು ಪಿರ್ಯಾದಿಗೆ ಕೊಟ್ಟ ನೊಟಿಸಿಗೆ ಪಿರ್ಯಾದಿದಾರನು ಉತ್ತರ ನೀಡಿದ್ದನೋ ಇಲ್ಲವೋ ಎಂದು ನಿಮಗೆ ಗೊತ್ತಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. 1ನೇ ಆರೋಪಿಯು ಪಿರ್ಯಾದಿದಾರನಿಗೆ ದಾಖಲೆಗಳನ್ನು ಹಾಜರು ಮಾಡುವಂತೆ ನೊಟೀಸ ನೀಡಿದ ನಂತರ ಪಿರ್ಯಾದಿದಾರನು ಆ ದಾಖಲೆಗಳನ್ನು ಕಾರ್ಮಿಕ ಇಲಾಖೆಗೆ ಕೊಟ್ಟಿದ್ದಾನೋ

ಇಲ್ಲವೋ ಎಂದು ನಿಮಗೆ ಗೊತ್ತಾಯಿತಾ ಎಂದರೆ ಸಾಕ್ಷಿಯು ಅದರ ಬಗ್ಗೆ ನನಗೆ ಗೊತ್ತಿಲ್ಲ ಎನ್ನುತ್ತಾರೆ. ನಿಪಿ-8 ನ್ನು ನಾನು ದಿ 11.07.2018 ರಂದು ದೃಢೀಕರಿಸಿ ಕೊಟ್ಟಿದ್ದೇನು. ಮೂಲ ಹಾಜರಾತಿ ಪುಸ್ತಕವನ್ನು ಎಸಿಬಿ ಅವರು 07.07.2018 ರಂದು ಜಪ್ತು ಮಾಡಿದ್ದರು. ದೋಷಾರೋಪಣಾ ಪತ್ರದ ಪುಟ ಸಂಖ್ಯೆ 178 ರಲ್ಲಿ ಕಾಣುವಂತೆ ದಿ 08.07.2018 ಮತ್ತು 09.07.2018 ರಂದು ಯಾರೆಲ್ಲ ಸಹಿ ಹಾಕಿದ್ದಾರೆ ಎಂದರೆ ಸಾಕ್ಷಿಯು ಸದರಿ ಆ ಪುಟದಲ್ಲಿ ಇರುವ ಅಟೆಂಡನ್ಸ ರೆಜಿಸ್ಟರ ಇದು ಪ್ರತ್ಯೇಕ ಅಟೆಂಡನ್ಸ ರೆಜಿಸ್ಟರ ಇದ್ದು ಅದು ಉಪ ಕಾರ್ಮಿಕ ಆಯುಕ್ತರ ಅಡಿಯಲ್ಲಿ ಇಡಲಾಗುತ್ತಿದ್ದು ಆ ಹಾಜರಾತಿ ಪುಸ್ತಕವನ್ನು ಎಸಿಬಿ ಅವರು ಜಪ್ತು ಮಾಡಿದರೋ ಇಲ್ಲವೋ ಎಂದು ನನಗೆ ಗೊತ್ತಿಲ್ಲ ಎನ್ನುತ್ತಾರೆ. ಪುಟ ಸಂಖ್ಯೆ 178 ರಲ್ಲಿಯೂ ಸಹ ಪಂಚರ ಸಹಿಗಳು ಮತ್ತು ಪೊಲೀಸ ಇನಸ್ಪೆಕ್ಟರ ಸಹಿ ಇವೆ ಎಂದರೆ ನಿಜ. ಪುಟ ಸಂಖ್ಯೆ 178 ನ್ನೂ ಸಹ ನಾನೇ ದೃಢೀಕರಿಸಿ ಕೊಟ್ಟಿದ್ದೇನೆ ಎಂದರೆ ನಿಜ. ಧ್ವನಿ ಮುದ್ರಣವನ್ನು ಗುರುತಿಸುವ ವಿಶೇಷ ತರಬೇತಿ ನಾನು ಪಡೆದಿಲ್ಲ ಎಂದರೆ ನಿಜ. ಪಿರ್ಯಾದಿದಾರನಿಗೆ ದಾಖಲೆಗಳನ್ನು ಹಾಜರು ಮಾಡುವಂತೆ 1ನೇ ಆರೋಪಿಯು ನೊಟೀಸ ಕೊಟ್ಟ ನಂತರ ಪಿರ್ಯಾದಿದಾರನು ಆರೋಪಿತರಿಗೆ ತೊಂದರೆ ಕೊಡಲು ಈ ಸುಳ್ಳು ದೂರನ್ನು ಕೊಟ್ಟು ಸುಳ್ಳು ಕೇಸು ಹಾಕಿಸಿದ್ದಾನೆ ಎಂದು ನನಗೆ ಗೊತ್ತಿದ್ದರೂ ನಾನು ಎಸಿಬಿ ಅವರ ಮಾತು ಕೇಳಿ ಅವರು ಹೇಳಿ ಕೊಟ್ಟ ರೀತಿಯಲ್ಲಿ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮುಮಾ–6 ಮತ್ತು ಮುಮಾ– 16 ರಲ್ಲಿ ಇರುವ ಧ್ವನಿ ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ. ಮು.ಮಾ–6 ರಲ್ಲಿ ಇದ್ದ ಒಂದು ವಿಡಿಯೋ ಆರೋಪಿಯದ್ದು ಅಲ್ಲ ಎಂದರೆ ಸರಿಯಲ್ಲ.

**ಮರು ವಿಚಾರಣೆ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಹೇಳಿಕೆ ಮೇರೆಗೆ ಗಣಕ ಯಂತ್ರದಲ್ಲಿ ಬೆರಳಚ್ಚು ಮಾಡಲಾಯಿತು.)

**ಓ ಹೇ ಕೆ ಸರಿ ಅದೆ**

**4ನೇ ಅಧಿಕ ಸತ್ರ ನ್ಯಾಯಾಧೀಶರು ಹಾಗೂ ವಿಶೇಷ**
**ನ್ಯಾಯಾಧೀಶರು (ಪಿಸಿಎ) ಬೆಳಗಾವಿ.**